

# ದೈವಿಕ ಜಾಲಾರಿ ವೃಕ್ಷ

ಚಿತ್ರ-ಲೇಖನ: **ಚನ್ನರಾಜ್ ಎಲ್.ಸಿ.**

ಮಾರ್ಚ್ ತಿಂಗಳಾರಂಭದಲ್ಲಿ ಮಾಗಡಿಯ ಬೆಟ್ಟಗಳಲ್ಲಿ ಎಲೆಗಳೆಲ್ಲ ಉದುರಿ ಪಳಪಳ ಹೊಳೆಯುವ ಚಿಗುರೆಲೆ ಮತ್ತು ಪರಿಮಳ ಬೀರುವ ಶ್ವೇತ ಬಣ್ಣದ ಗೊಂಚಲು ಹೂಗಳಿಂದ ಮೈದುಂಬುವ ಮರ ನೋಡುಗನ ಕಣ್ಮನ ಸೆಳೆಯು ತ್ತದೆ. ಇದಕ್ಕೆ ಹೆಸರು ಜಾಲಾರಿ ಮರ. ಶಿವರಾತ್ರಿಗೆ ವಿದಾಯ ಹೇಳುವ ಚಳಿ, ಬಿಳಿಮೋಡಗಳಿಲ್ಲದ ನೀಲಿ ಬಾನಿನ ವಿಶಾಲ ಕ್ಯಾನ್‌ವಾಸ್ ಮೇಲೆ ಅರಳುವ ಕಲಾಕೃತಿಗಳಂತೆ ನಿಲ್ಲುವ ಜಾಲಾರಿ ಮರಗಳನ್ನು ನೋಡುವುದೇ ಅನಂದ.

ಕನ್ನಡದಲ್ಲಿ ಅರಗಿನಮರ, ಜಲರಂಡ, ಜಾಲದ ಮರ, ಜಾಲಾರಿ ಮರ. ಡಿಪ್ಟಿರೊಕಾರ್ಪೇಸಿ ಸಸ್ಯಕುಟುಂಬಕ್ಕೆ ಸೇರಿರುವ ಜಾಲಾರಿ ಮರದ ವೈಜ್ಞಾನಿಕ ಹೆಸರು ಶೊರಿಯರಾಕಬರ್ಜೆ. ಏಪ್ರಿಲ್‌ನಿಂದ ಫೆಬ್ರುವರಿ ತಿಂಗಳವರೆಗೆ ಅಚ್ಚ ಹಸಿರಿನಿಂದ ಮಿಂಚುವ ದಟ್ಟವಾದ ಎಲೆಗಳಿಂದ ಕೂಡಿದ್ದು, ಮಾರ್ಚ್ ತಿಂಗಳಲ್ಲಿ ಎಲೆಗಳು ಉದುರಿ ಚಿಗುರೆಲೆ ಜೊತೆ ಗೊಂಚಲು ಶ್ವೇತ ಬಣ್ಣದ ಹೂಗಳು ಜಾಲಾರಿ ಮರಕ್ಕೆ ಚೈತನ್ಯ, ಸಂಭ್ರಮ ತರುತ್ತವೆ. ಬಣ್ಣದ ಹತ್ತಾರು ಹೂಗುಬ್ಬಿಗಳು, ಜೇನ್ನೊಣಗಳು ಮಕರಂದ ಹೀರುತ್ತಾ ಬೇಸಿಗೆ ದಾಹ ತಣಿಸಿಕೊಳ್ಳುತ್ತಿರುತ್ತವೆ. ತಮಿಳುನಾಡಿನ ತಳಿ, ಕನ್ನಡನಾಡಿನ ಮಾಗಡಿ, ಕೊರಟಗೆರೆಯಲ್ಲಿ ನೋಡಿದ ಜಾಲಾರಿ ಮರಗಳು ಒಂಟಿಯಾಗಿರದೆ ಗುಂಪುಗುಂಪಾಗಿದ್ದವು.

ಬುದ್ಧನ ತಾಯಿ ಮಾಯವತಿ ದಕ್ಷಿಣ ನೇಪಾಳದ ತನ್ನ ತೌರುಮನೆಯ ಲುಂಬಿನಿ ಉದ್ಯಾನವನದಲ್ಲಿದ್ದ ಜಾಲಾರಿ ಮರದಡಿಯಲ್ಲಿ ಬುದ್ಧನನ್ನು ಹೆತ್ತಳೆಂದು ಮತ್ತು ಬುದ್ದ ಮಲಗುತ್ತಿದ್ದ ಜಾಗದ ಸುತ್ತಲಿದ್ದ ನಾಲ್ಕು ಜೋಡಿ ಜಾಲಾರಿ ಮರಗಳು ಬುದ್ಧ ಮರಣ ಹೊಂದಿದ್ದ ತಕ್ಷಣ ಶ್ವೇತ ಬಣ್ಣಕ್ಕೆ ತಿರುಗಿದ್ದವು ಎಂಬುದು ಬೌದ್ಧ ಧರ್ಮದ ಸಂಸ್ಕೃತಿಯಲ್ಲಿದೆ. ಇದರ ಸತ್ಯಾಸತ್ಯತೆ ಏನಾದರು ಇರಲಿ, ಜಾಲಾರಿ ಮರಗಳು ಸಾಮಾನ್ಯವಾಗಿ ಗುಂಪು ಗುಂಪಾಗಿದ್ದು ಜೂನ್ ತಿಂಗಳ ಮೃಗಶಿರ, ಆರಿದ್ರಾ ಮಳೆಗಳಲ್ಲಿ ಬಲಿತ ಬೀಜಗಳು ಮಣ್ಣು ಸೇರಿ ಮೊಳೆಯುತ್ತವೆ.

1799 ರ ಟಿಪ್ಪು ಮತ್ತು ಬ್ರಿಟಿಷರಿಗೆ ನಡೆದ ನಾಲ್ಕನೆ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಹತ್ಯೆಯ ನಂತರ ಈಸ್ಟ್ ಇಂಡಿಯಾ ಕಂಪೆನಿ ಸಸ್ಯವಿಜ್ಞಾನಿ ಡಾ. ಬುಕಾನನ್ ಗೆ ಟಿಪ್ಪು ಆಡಳಿತ ಪ್ರದೇಶದ ಸಾಮಾಜಿಕ, ಕೃಷಿ, ವ್ಯಾಪಾರ, ಜಾತಿ, ಸಂಪ್ರದಾಯ, ಕಾಡಿನ ಸಂಪನ್ಮೂಲಗಳ ಮಾಹಿತಿಗಳನ್ನ ಅಧ್ಯಯನ ಮಾಡಲು ನೇಮಿಸಿದ್ದಾಗ, ಶ್ರೀರಂಗಪಟ್ಟಣದಿಂದ ಮಾಗಡಿಗೆ ಬಂದ ಬುಕಾನನ್ ಮಾಗಡಿಯ ಬೆಟ್ಟಗುಡ್ಡಗಳಲ್ಲಿರುವ ಜಾಲಾರಿ ಮರಗಳ ಬಗ್ಗೆ ಹೇಳುತ್ತಾ, ಯುದ್ಧದ ಸಮಯದಲ್ಲಿ ಲಾರ್ಡ್ ಕಾರನ್‌ವಾಲೀಸ್ ಪಡೆಯ ಸೈನ್ಯ ಜಾಲಾರಿ ಮರಗಳನ್ನ ವಿವೇಚನೆ ಇಲ್ಲದೆ ಕಡಿದರು ಎಂದು ದಾಖಲಿಸಿದ್ದಾರೆ.

ಮೈಸೂರು ರಾಜಮನೆತನ ಮತ್ತು ಟಿಪ್ಪುವಿನ ಆಡಳಿತದ ಕಾಲದಲ್ಲಿ ಜಾಲಾರಿ ಮರಗಳಲ್ಲಿ ಅರಗಿನ ಕೀಟಗಳನ್ನ ಸಾಕಾಣಿಕೆ ಮಾಡಿ ನೈಸರ್ಗಿಕ ಅರಗನ್ನು ಉತ್ಪಾದನೆ ಮಾಡುತ್ತಿದ್ದರು. ಕೊರಟಗೆರೆ, ಮಧುಗಿರಿಯ ಹಳ್ಳಿಗಳಲ್ಲಿ ಅರಗಿನ ಕೃಷಿಯ ಬಗ್ಗೆ ನಿಪುಣರಾದ ಸಮುದಾಯಗಳಿದ್ದವು. ಅರಗನ್ನು ವಾರ್ನಿಷ್, ಮುದ್ರಣಶಾಹಿ ತಯಾರಿಕೆಗೆ ಮತ್ತು ಅಕ್ಕಸಾಲಿಗರು ಚಿನ್ನ ಕರಗಿಸಲು, ಆಭರಣಗಳಲ್ಲಿ ಅರಳನ್ನ ಕೂಡಿಸಲು ಜಾಲಾರಿಮರದ ಇದ್ದಲು ಮತ್ತು ಅರಗನ್ನು ವಿಶೇಷವಾಗಿ ಬಳಸುತ್ತಿದ್ದರು. ಗಟ್ಟಿಮುಟ್ಟಾದ ಮತ್ತು ಗೆದ್ದಲು ಹುಳುಗಳು ಮುಟ್ಟದ ಮರವಾದ್ದರಿಂದ ಎತ್ತಿನ ಗಾಡಿಯ ಗಾಡಿ ಮೂಕು, ಚಕ್ರ, ಅಚ್ಚು, ಪೀಠೋಪಕರಣ, ಬಾಗಿಲು, ಕಿಟಕಿ ನಿಲುವುಗಳಿಗೆ ಬಳಸುತ್ತಾರೆ. ಪ್ರಾರಂಭದಲ್ಲಿ ರೈಲ್ವೆ ಹಳಿಗಳ ತಳಭಾಗಕ್ಕೆ ವ್ಯಾಪಕವಾಗಿ ಬಳಸುತ್ತಿದ್ದರು. ಅಮಶಂಕೆ ನಿವಾರಣೆಗೆ ಮರದ ಗೋಂದನ್ನ ಜೇನುತುಪ್ಪ ಅಥವಾ ಸಕ್ಕರೆ ಜೊತೆ ತಿನ್ನಿಸುವ ಚಿಕಿತ್ಸೆ ಆಯುರ್ವೇದದಲ್ಲಿದೆ.

ತುಮಕೂರು ಜಿಲ್ಲೆ ಕೊರಟಗೆರೆಯ ಬುಕ್ಕಾಪಟ್ಟಣ, ಬರ್ಕ ಹಳ್ಳಿಗಳ ಮಧ್ಯದಲ್ಲಿರುವ ದೊಡ್ಡಮ್ಮ ದೇವಮಂದಿರದಲ್ಲಿ ನಡೆಯುವ ದೊಡ್ಡಮ್ಮನ ಜಾತ್ರೆಯಲ್ಲಿ ಜಾಲಾರಿ ಮರದ ಹೂಗಳನ್ನ ಪೂಜೆಗೆ ವಿಶೇಷವಾಗಿ ಬಳಸುತ್ತಾರೆ. ಪೂಜೆಗೆ ಮೊದಲು ಏಳು ಜಾಲಾರಿ ಹೂಗಳ ಮೊಗ್ಗುಗಳನ್ನು ತಂದಿಡುತ್ತಾರೆ. ಒಂದೊಂದೇ ಮೊಗ್ಗುಗಳು ಅರಳಿದಾಗ ಅಗಲಿದ ಏಳು ಜನ ಅಕ್ಕ ತಂಗಿಯರು ಜಾತ್ರೆಗೆ ಬಂದು ಸೇರುತ್ತಿದ್ದಾರೆ ಎಂಬ ನಂಬಿಕೆ. ಒಂದು ತಿಂಗಳು ನಡೆಯುವ ಜಾತ್ರೆಯಲ್ಲಿ ಏಳು ಜನ ಅಕ್ಕ ತಂಗಿಯರಿಗೆ ವಿಶೇಷ ಪೂಜೆಯಿರುತ್ತದೆ. ಮರದ ದೂಪ ಹಾಕಿ ಮಳೆ, ಬೆಳೆ, ಜಾನುವಾರು ಮತ್ತು ಮನುಷ್ಯರ ಆ ವರ್ಷದ ದುಃಖ ದುಮ್ಮಾನಗಳ ಪಟ್ಟ ಹೇಳುವ, ಶಿವರಾತ್ರಿಯ ಪೂಜೆಗೆ ಜಾಲಾರಿ ಹೂಗಳನ್ನ ಬಳಸುವ ಸಮುದಾಯಗಳು ಕುಲದ ಮರಗಳನ್ನಾಗಿ ಜಾಲಾರಿ ಮರಗಳನ್ನ ಕಾಪಾಡುವ ಪರಂಪರೆಯಿದೆ. ಈಗಲೂಲು ಶಿವರಾತ್ರಿಯ ಹಿಂದೆ ಮುಂದೆ ಕೊರಟಗೆರೆಯ ಬೀದಿಗಳಲ್ಲಿ ಪರಿಮಳ ಸೂಸುವ ಜಾಲಾರಿ ಹೂ ಮುಡಿದ ಮತ್ತು ಮಾರಾಟ ಮಾಡುವ ಮಹಿಳೆಯರು ಅಡ್ಡಾಡುತ್ತಿರುತ್ತಾರೆ. ಜಾಲಾರಿ ಮರ ಮೈದುಂಬಿ ಹೂ ಬಿಟ್ಟರೆ ಮಳೆ, ಬೆಳೆ ಸಮೃದ್ಧಿ. ಕೆಲವೇ ಕೊಂಬೆಗಳಲ್ಲಿ ತೆಳುವಾಗಿ ಹೂ ಬಿಟ್ಟರೆ ಮಳೆ, ಬೆಳೆ ಅಷ್ಟಕಷ್ಟೆ ಎಂಬುದು ರೈತರ ಅನುಭವ. ಬೆಟ್ಟಗುಡ್ಡಗಳಲ್ಲಿ ಸಹಜವಾಗಿ ಬೆಳೆಯುತ್ತಿದ್ದ ಜಾಲಾರಿ ಮರಗಳು ಅಳಿವಿನಂಚಿನಲ್ಲಿರುವ ಮರಗಿಡಗಳ ಕೆಂಪು ಪಟ್ಟಿಯಲ್ಲಿವೆ.



